ದಿನಾಂಕಃ 08.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಕೆ ಸಿ ವಕೀಲರಿಂದ,**

ನಾನು ಲಾಲನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಲ್ಯಾಬ್ ಟೆಕ್ನಿಷಿಯನ್ ಆಗಿ ಮೈಸೂರಿನಲ್ಲಿ ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತಿರುತ್ತೇನೆ. ಆರೋಪಿ ನನಗೆ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ಬೆಟ್ಟದಪುರ ಹೋಬಳಿ, ತಮ್ಮಡಹಳ್ಳಿ ಗ್ರಾಮದವರು. ಆರೋಪಿಯ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಪರಿಚಯ ಇರುವುದಿಲ್ಲ. ಆರೋಪಿಯನ್ನು ನನಗೆ ನಮ್ಮ ಗ್ರಾಮದ ಅರುಣ್ ಎಂಬುವವರು ಪರಿಚಯ ಮಾಡಿಕೊಟ್ಟಿರುತ್ತಾರೆ.

ಆರೋಪಿ ಕೆಲಸ ಮಾಡುತ್ತಿರುವ ಸ್ಥಳದಲ್ಲಿ ನಾನು ಹಣ ಪಾವತಿ ಮಾಡಿದ ಒಂದು ದಿನದ ಹಿಂದೆ ಹಣ ಕೇಳಿರುತ್ತಾರೆ. ನಾನು ಈಗ ಕೆ ಆರ್ ನಗರದಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ30.06.2025 ರಂದು ಸುಮಾರು 10.00–11.00 ಗಂಟೆಯ ಒಳಗಡೆ ಹಣ ಕೇಳಿರುತ್ತಾರೆ. ನಾನು ದಿಃ30.06.2025 ರಂದು ಕೆಲಸಕ್ಕೆ ಹೋಗಿರುವುದಿಲ್ಲ. ನಾನು ಜೂನ್ 2025 ರ ಮಾಹೆಯ ಹಾಜರಾತಿ ದಾಖಲಾತಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಆರೋಪಿ ದಿಃ30.06.2025 ರಂದು ನನ್ನ ಬಳಿ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ01.07.2025 ರಂದು ಆರೋಪಿಗೆ ನಾನು ಸಾಲವಾಗಿ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯ ಮೊಬೈಲ್ ಸಂಖ್ಯೆ ಗೊತ್ತಿರುತ್ತದೆ. ಆದರೆ ನನಗೆ ನೆನಪಿರುವುದಿಲ್ಲ. ನನ್ನ ಮೊಬೈಲ್ ಸಂಖ್ಯೆಃ 8970763970 ಆಗಿರುತ್ತದೆ. ಈ ಮೊಬೈಲ್ ನಂಬರನ್ನು ಮಾತ್ರ ಉಪಯೋಗಿಸುತ್ತಿದ್ದೇನೆ. ಆರೋಪಿ ನನಗೆ ಪರಿಚಯ ಇರುವುದಿಲ್ಲ ಎಂದರೆ

ಸರಿಯಲ್ಲ. ನಮ್ಮ ಗ್ರಾಮದ ವಿಜಯ್ ಕುಮಾರ್ ಎಂಬುವವರು ಎಂ ಎಸ್ ಐ ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವಿಜಯ್ ಕುಮಾರ್ ರವರ ಸಹೋದರ ನಾಗರಾಜು ನಮ್ಮ ಗ್ರಾಮದಲ್ಲೇ ಇರುತ್ತಾರೆ ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನಾಗರಾಜು ನಡುವೆ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ನಾಗರಾಜು ರವರ ಬಳಿ ರೂ.20,000/- ಹಣವನ್ನು ಸಾಲವಾಗಿ ಪಡೆದುಕೊಂಡು ಸಾಲದ ಭದ್ರತೆಗಾಗಿ ನಿಶಾನೆ ಪಿ 1 ರ ಚೆಕ್ಕನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಆರೋಪಿಯ ವಾಸ ಮಾಡುತ್ತಿರುವ ಮತ್ತು ಕೆ. ಆರ್ ನಗರದ ವಿಳಾಸಕ್ಕೆ ತಿಳುವಳಿಕೆ ಪತ್ರ ನೀಡಿರುತ್ತೇನೆ. ಆರೋಪಿ ಕೆ ಆರ್ ನಗರದ ವಾರ್ಡ್ ನಂಬರ್ 14, ಕಾಳಯ್ಯನಹಳ್ಳಿ ರಸ್ತೆಯಲ್ಲಿ ವಾಸವಾಗಿದ್ದರು. ಸದರಿ ತಿಳುವಳಿಕೆ ಪತ್ರಗಳು ಆರೋಪಿಗೆ ಜಾರಿಯಾಗಿರುವುದಿಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.